**ಅಸಲು ದಾವಾ ನಂಃ 49 /2021**
**ಪಿ.ಡಬ್ಲ್ಯೂಃ 1,**

**<u>ದಿನಾಂಕ :17-12-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಪಾಟಿ ಸವಾಲು :- ಶ್ರೀ. ಜಿ.ಎಸ್. ಪ್ರತಿವಾದಿ ಪರ ವಕೀಲರಿಂದ :</u>**

ಕಳೆದ ಬಾರಿ ಜಮೀನುಗಳ ಕುರಿತು ದಾಖಲೆ ಸಲ್ಲಿಸಿದ್ದೇನೆ ಅವು ಯಾವುವು ಎಂದು ಗುರತಿಲ್ಲಾ. ನಾನು ಸಲ್ಲಿಸಿದ ನಿಪಿ-14 ರಿಂದ 16 ರಲ್ಲಿ ವಿಳಾಸ ಒಂದೇ ಇದೆ. ಭೀಮರಾಯ ಯಾವ ವರ್ಷದಲ್ಲಿ ತೀರಿ ಹೋಗಿದ್ದಾರೆ ಎಂದು ಗೊತ್ತಿಲ್ಲಾ. ಭೀಮರಾಯನ ಮರಣ ಪ್ರಮಾಣ ಪತ್ರವನ್ನ ನ್ಯಾಯಾಲಯದ ಆದೇಶ ಪಡೆದ ನಂತರ ಪಡೆದುಕೊಂಡಿದ್ದೇನೆ. ನಾನು ಸಲ್ಲಿಸಿದ ನಿಪಿ-17 ರಿಂದ 21 ಫೋಟುಗಳನ್ನು ಈಗಿನ ತಂತ್ರಜ್ಞಾನ ಬಳಸಿ ಸೃಷ್ಟಿಸಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯು ಸಲ್ಲಿಸಿದ ದಾಖಲೆಗಳನ್ನು ನೋಡಿ ನಾನು ಈಗ ದಿನಾಂಕ: 18-11-2025 ರಂದು ದಾಖಲೆಗಳನ್ನು ಸೃಷ್ಟಿಸಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಿಪಿ-14 ರಿಂದ 16 ರಲ್ಲಿ ತಿಳಿಸಿದ ವಿಳಾಸ ಒಂದಕ್ಕೊಂದು ತಾಳೆ ಇಲ್ಲಾ ಎಂದರೆ ಸರಿಯಲ್ಲ. ನಾನು ಭೀಮರಾಯನ ಮಗಳು ಎಂದು ತೋರಿಸಲು ದಾಖಲೆಗಳನ್ನು ಸೃಷ್ಟಿಸಿ ಆತನ ಆಸ್ತಿಗಳನ್ನು ಹೊಡೆಯಬೇಕೆಂಬ ಉದ್ದೇಶದಿಂದ ದಾಖಲೆಗಳನ್ನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲಾ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸರಿ.ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಚಿತ್ತಾಪೂರ.**